ಕಥೆ



## ಆನಂದ ಎಸ್. ಗೊಬ್ಬಿ

ಕಲೆ: ರಾಮಕೃಷ್ಣ ಸಿದ್ರಪಾಲ

# ಜೀವಸೆಲೆ



ಆ ದಿನ ಅವಳಿದ್ದ ಆ ವಾತಾವರಣನೇ ತೀರಾ ಬದಲಾದಂಗಾಗಿತ್ತು. ಮಾಡಕತ್ತಿದ್ದ, ಇಚ್ಛಾ ಇಲ್ಲದ ಕೆಲಸ ಯಾವುದೇ ಗತಿ ಕಾಣದಕ್ಕ ತಾಯಿ ಕಣ್ಣಿಗೆ ಚುಚ್ಚಕತ್ತಿದ್ದಳು. ಮನಸ್ಸಿಗಿ ಡಿಂಗ್ ಬಡಿದವಳಂತೆ ಯಾವಾಗಲೂ ಸುಂದಾಗಿರಕತ್ತಿದ್ದಳು. ರಾತ್ರಿ ಒಮ್ಮೆ ತಾಯಿ ಬಲವಂತಕ್ಕ ಗಂಗಳದಾಗ ಹಿಡಿಕೇಟು ಅನ್ನ ನೀಡಿಕೊಂಡು, ಅಕಿನ ಸಮಾಧಾನಕ್ಕ ಕತ್ತಲದಾಗ ಪಾರಿ ತುತ್ತನ್ನ ತಿಂದಂಗ್ ಮಾಡಿಕೇಸಿ ಅಂಗಳಕ್ಕ ಚೆಲ್ಲಿದ ಅನ್ನ, ನಾಯಿ ಹೊಟ್ಟಿ ಸೇರುತ್ತಿತ್ತು. ದುಃಖಿಸುವುದು ಚಿಂತಿಸುವುದಂತು, ಪಾರಿ ಹಣೆಬರಕ್ಕ ಅಂಟಿದ ದೈವದ ವರನೇ ಆಗಿತ್ತು. ಕಡು ಕತ್ತಲಿನಲ್ಲಿ ಜಾರಿದ ಕಪಾಳ ಮಡ್ಡಿವರೆಗಿನ ಕಣ್ಣೀರನ್ನು ಮೆಲ್ಲಕ್ ತುದಿ ಲಂಗದಿಂದ ಒರಿಸಿಕೊಂಡು, ಮುಚ್ಚಿದ ಮೂಗನ್ನು ಹಗುರ ಮಾಡಿಕೊಳ್ಳದ್ಕ ಸೀದಿಗೇಸಿ ದಿಂಬಿಗೆ ಕೊಟ್ಟರೂ ತಲಿಗೆ ನಿದ್ದಿ ಅಂಬೋದು ಸುಳಿಯದೇ ಅವನಾಡಿದ ಮುಳ್ಳಿನಂತ ಮಾತು ಎದಿಗೆ ಮ್ಯಾಲಿಂದಮ್ಯಾಲ ಚುಚ್ಚಿ ಮನಸ್ಸಿಗೆ ಸಂಕ್ಟ ಮಾಡಿದವು. ಎಷ್ಟೇ ಮಗ್ಗಲು ಬದಲಿಸಿ ಒದ್ದಾಡಿ, ಕುಂತು ಎದ್ದು ಸಾಕ್ಕಾಗಿ ಕೌದ್ಯಾಗ ಒಮ್ಮೆಯೂ ನಿದ್ದಿಯ ಸುಳಿವು ಆಕೆಗೆ ಸುಳಿಯುವಂಗ ಕಾಣಲಿಲ್ಲ. ಪದೇಪದೇ ಆತನ ಚುಚ್ಚುಮಾತುಗಳೇ ಮುಂಗಾರಿ ಮಳಿಯ ಗುಡುಗಿನಂಗ ಬಡಿದು ಆಕೆಯನ್ನು ಇಂಚಿಂಚು ತೇವಗೊಳಿಸುತ್ತಿದ್ದು.

ರಾತ್ರ್ಯಾಗಿನ ಮಗಳ ಸಂಕ್ಟ, ಇರುಸುಮುರಿಸು ನೋಡ್ಲಾರದೆ ಗಸನ್ ಎದ್ದ ಗೌರವ್ವ ದೌಡದೌಡ ಮನಿ ದಗದ ಮಾಡಿಕೊಂಡಳು. ಮೈಮ್ಯಾಗ ಯಾಡು ಚೆರಿಗಿ ಅವಸರದಾಗ ನೀರಾಕೆಂಡು ತಾಯಿ, ಮಗಳು ಬಗಲ ಚೀಲ ಬಡಕೊಂಡು ಮುಂಜಾನಿ ಬಸ್ಸು ಏರಿ ಕುಂತ್ರು. ಜತ್ಯಾಗ ತನಗ ಏನನ್ನು ಅನ್ನದೇ ಆಡದೇ ಕರಕೊಂಡು ಹೊರಟಿದ್ದು ತಿಳಿಲಾರದ ವಿಷ್ಯ ಪಾರಿಗೆ ಕಾಡಕತ್ತಿತ್ತು. ಗಂಟಾಕಿದ ಮಾರಿ ನೋಡಿ ಕೇಳಬೇಕನಿಸಿದ್ರೂ ತಾಯಿಗೆ ಧೈರ್ಯ ಸಾಲದೇ ಗಪ್ಪ ಸೀಟಿಗೆ ಬೆನ್ನಚ್ಚಿದ್ದಳು. ತನ್ನ ಬುದ್ಧಿಮಟ್ಟದ ತಿಳಿವಳಿಕ್ಯಾಗ ಪಾರಿ ಹಲ ಬಗೆದಾಗ ಸುತ್ತನಕಡಿಗಿ ಯೋಚಿಸಿ ನಿತ್ರಾಣಿಗಿ ಬಂದು ಸರಿಯಾಗಿ ಕಣ್ಣಿಗೆ ನಿದ್ದಿ ಇಲ್ಲದಕ್ಕ ಬಸ್ಸಿನ ಸೀಟಿಗೆ ಮೆಲ್ಲಕ್ ತಲಿ ಕೊಟ್ಟಳು.

ಹಗಲು ಸರಿದು ಕತ್ತಲು ಸಮೀಪಕ್ಕ ಬರಾಕತ್ತಿತ್ತು. ಇಳಿ ಸಂಜಿ ಹೊತ್ತಿನ್ನಾಗ ಬಿಸಿಲು ಎಂಬುದು ತೆಳುವಾಗಿ ಕರಿ ಮಾಡವನ್ನು